Regd No B G 155 Sri 20—5—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಪಾದಕರು – ಎ.ಆರ್.ಸುಬ್ಬರಾಯರು ಎಂ.ಎ ಬಿ.ಎಲ್ ಮತ್ತು ಕೆ.ಟಿ.ಭಾಷ್ಯಂ ಎಂ.ಎ

ಸಂಪಾದಕರು – ಧರ್ಮಪ್ರಭಾಕರ ಎಂ.ಎಸ್. ಕೃಷ್ಣಂರವ್

ಮಹಿಳಾ ದಿನ

ಶ್ರೀ ಜವಾಹರಲಾಲ್ ನೆಹರೂರವರು ಸ್ಮಾರಕ ಸಭಾಭವನ ನಾಳೆಯಿಂದ 27.೦ ವರೆಗೆ ರಂಗಾಚಾರ್ಲು ಪುರಭವನದಲ್ಲಿ ನಗರ ಕಾಂಗ್ರೆಸ್‌ನ ಮಹಿಳಾ ಶಾಖೆ ನಡೆಸಲಿವೆ. ನಾಳೆ ಬೆಂಜೆ 6 ಗಂಟೆಗೆ ಮಹಿಳೆಯರ ದಿನ ನಡೆಯುವದು.

★

ಸಮ್ಮೇಳನ

ಮೈಸೂರು ರಾಜ್ಯ ಸ್ಥಳೀಯಸಂಸ್ಥೆಗಳ ಹೈಸ್ಕೂಲ ಉಪಾಧ್ಯೋಗಿಗಳ ಸಂವೆಳನ ಈ ವಾರ ದಿ 26 ಮತ್ತು 27 ರಲ್ಲಿ ಮೈಸೂರಿನಲ್ಲಿ ನಡೆಯುವುದು.

★

ಆಗಮನ

ಪ್ರಧಾನಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ರಷ್ಯ ಪ್ರವಾಸ ಮುಗಿಸಿಕೊಂಡು ವಾಪಸಾದರು.

★

ಗುಂಡಿನೇಟು

ಪೂರ್ವ ಪಾಕಿಸ್ತಾನದ ರೈಫಲು ದಳದವರು ಲಾರಿತಿಲ್ಲ ಡುಮಾಬಾರಿ ಮೇಲೆ ಗುಂಡು ನಿನ್ನೆ ಹಾರಿಸಿದರು

●

ಅಭಾವವಿಲ್ಲ

ನೀವೇ ಎಣ್ಣೆ ಮುಕ್ತ ಡೀಸಲು ಎಣ್ಣೆ ಅಭಾವವುಂಟಾಗಿಲ್ಲವೆಂದು ನವ ದೆಹಲಿ ವಾರ್ತೆ

❋

ನಾಳೆಯಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಂಜಕಾಂಖ್ಯಪಕ್ಕ, ಜ್ಯೋತಿರ್ವಿದ್ವನ್ಮಣಿ
ಸಂಪಕೃಷ್ಣಜೋಯಿಸರಿಂದ

21 ಶಕ್ರವಾರ ಷಷ್ಠಿ ಉತ್ತರಾಷಾಢ

ಶಂಕುಸ್ಥಾಪನೆ

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಪ್ರಾಜೆಕ್ಟ್—ಹುದ್ಲೂರುಡ್ಯಾಂ ಇದರ ಶಂಕುಸ್ಥಾಪನೆಯನ್ನು ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಕೈಗಾರಿಕಾ ಮಂತ್ರಿ ಶ್ರೀ ಕೆ. ಮಲ್ಲಪ್ಪನವರು ಅಧ್ಯಕ್ಷತೆಯಲ್ಲಿ 24 ನೇ ತಾ|| ಸಂಜೆ 5 ವರೆ ಗಂಟೆಗೆ ನೆರವೇರಿಸುವರು.

❋

ಮರಣ

ಕದನ ವಿರಾಮ ಗೆರೆ ದಾಟಿ ಘರ್ಷಣೆ ಆದ ಸಂದರ್ಭದಲ್ಲಿ ನಾಲ್ವರು ಪಾಕಿಸ್ತಾನಿ ಸೈನಿಕರು ಕೊಲ್ಲಲ್ಪಟ್ಟರೆಂಬುದಾಗಿ ಜಮ್ಮು ವಾರ್ತೆ

❋

ಸತ್ತವರ ಸಂಖ್ಯೆ

ಇತ್ತೀಚಿಗೆ ಆದ ಬಿರುಗಾಳಿ ಅನಾಹುತದಲ್ಲಿ ಪೂರ್ವ ಪಾಕಿಸ್ತಾನದಲ್ಲಿ 13 ಸಾವಿರ ಮಂದಿ ಮರಣಹೊಂದಿದರೆಂದು ಪ್ರಕಟವಾಗಿದೆ.

❋

ಸಹಾನುಭೂತಿ

ಪೂರ್ವ ಬಂಗಾಳದಲ್ಲಿ ಆದ ಬಿರುಗಾಳಿ ಅನಾಹುತದ ಬಗ್ಗೆ ಭಾರತ ಅಧ್ಯಕ್ಷರಾದ ಡಾ|| ರಾಧಾಕೃಷ್ಣನ್ರು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ

★

ಪಾಕಿಸ್ತಾನ ಕದನ ವಿರಾಮ ಗೆರೆಯನ್ನು ಪಾಕಿಸ್ತಾನ ನೂರಾನಲವತ್ತು ನಾಲ್ಕು ಬಾರಿ ಉಲ್ಲಂಘನೆ ಮಾಡಿದೆ.

★

ಭಾರತ ಉಪಾಧ್ಯಕ್ಷ ಡಾ|| ಜಕೀರ್ ಹುಸೇನರು ಈ ರಾತ್ರಿ ವಿಷ್ಣು ಮತ್ತು ಹುಲಿರೋಪಿನ ಪ್ರವಾಸಕ್ಕೆ ಪ್ರಯಾಣ ಬೆಳೆಸುವರು

ಪಾಕಿಸ್ತಾನಕ್ಕೆ ಭಾರತದ ಪ್ರತಿಭಟನೆ

ಪೂರ್ವ ಪಾಕಿಸ್ತಾನ ಗಡಿಯಲ್ಲಿ ಅಧಿಕವಾಗಿ ಸೇನೆಯನ್ನು ಪಾಕಿಸ್ತಾನ ಜಮಾವಣೆ ಮಾಡಿರುವ ಬಗ್ಗೆ ಪಾಕಿಸ್ತಾನದ ಸರ್ಕಾರಕ್ಕೆ ಭಾರತ ಸರ್ಕಾರ ಪ್ರತಿಭಟಿಸಿದೆ ಜಮಾವಣೆ ಮಾಡಿರುವ ಸಶಸ್ತ್ರ ಸೇನೆಯನ್ನು ವಾಪಸು ತೆಗೆದು ಕೊಳ್ಳುವಂತೆ ಭಾರತ ಸರ್ಕಾರ ಸೂಚಿಸಿದೆ ನವ ದೆಹಲಿಯಲ್ಲಿ ಪಾಕಿಸ್ತಾನದ ಹೈ ಕಮಿಷನರ್‌ಗೆ ಭಾರತ ಪ್ರತಿಭಟನೆ ತಲುಪಿಸಿತು ಭಾರತ ಸೇನೆ ಜಮಾವಣೆ ಮಾಡಿದೆ ಎಂಬ ಪಾಕಿಸ್ತಾನದ ಆರೋಪವನ್ನು ಭಾರತ ಸರ್ಕಾರ ನಿರಾಕರಿಸಿದೆ.

❋

ಸಾವು ನೋವು

ಕಚ್‌ನಲ್ಲಿ ಆದ ಘರ್ಷಣೆಯಲ್ಲಿ ಭಾರತದ ಸಾವು ನೋವು 93 ಪಾಕಿಸ್ತಾನದ್ದು 350

★

ಸರ್ಕಾರದ ವಶ

ಜಾಂಜಿಬಾರು ಸರ್ಕಾರವು ಭಾರತದ ವರ್ತಕರಿಗೆ ಸೇರಿದ ಕಟ್ಟಡಗಳು ಮೋಟಾರು ಗ್ಯಾರೇಜುಗಳನ್ನು ವಶಪಡಿಸಿಕೊಂಡಿದೆ

★

ಬಾಂಬು ದಾಳಿ

ಉತ್ತರ ವಿಯಟ್ನಾಂ ವೇಲೆ ಅಮೆರಿಕಾ ವಿಮಾನಗಳು ನಿನ್ನೆ ಬಾಂಬು ಹಾಕಿದವು

❋

ವಿಯಟ್ನಾಂನಲ್ಲಿ ಶಾಂತಿ ಸೆಲೆಯಲು ಅಮೆರಿಕಾ ಕುಂಬಾ ಪ್ರಯತ್ನಿಸುತ್ತಿರುವ ವಾರ್ತೆ ವಾಷಿಂಗ್ಟನ್ನಿಂದ ಬಂದಿದೆ.

ಭಾರತದ ಪ್ರತಿಭಟನೆ

ಪ್ರದರ್ಶನ

ಮಂಗಳೂರಿನಿಂದ ಬಂದಿರುವ ವರದಿ ಈಗ ವಶಮಾಡಿಕೊಂಡಿರುವ ಸಾವಿನಿಂದ ಇನ್ನೂರು ಎಕರೆ ಜೊತೆ ಮತ್ತೆ ಸಾವಿನಿಂದ ಐನೂರು ಎಕರೆ ಭೂಮಿಯನ್ನು ಕೈಗಾರಿಕಾ ವಾಣಿಜ್ಯ ಉಪಯೋಗಕ್ಕಾಗಿ ವಶಪಡಿಸಲಾಗುವದಾಗಿ ಪ್ರಕಟಿಸಿರುವದನ್ನು ಪ್ರತಿಭಟಿಸಿ ಅದನ್ನು ನಿಲ್ಲಿಸಬೇಕೆಂದು ರೈಲ್ವೆ ಮಂತ್ರಿ ಶ್ರೀ ಪಾಟೀಲರಿಗೆ ಎದುರು ಪ್ರದರ್ಶನ ಮಾಡಿದರು

—

ಪಶ್ಚಿಮ ಜರ್ಮನಿಗೆ ಬ್ರಿಟೀಷು ರಾಣಿಯವರು ಭೇಟಿ ಕೊಟ್ಟ ಆರಂಭವಾಯಿತು ಕಳೆದ ಐವತ್ತು ವರ್ಷಗಳಿಂದ ಅಲ್ಲಿಗೆ ಬ್ರಿಟಿಷು ರಾಜ ರಾಣಿ ಹೋಗಿರಲಿಲ್ಲ

ಫಿನ್ಲೆಂಡಿಗೆ ಕಾಫಿ ಸರಬರಾಜುಮಾಡಿ ಅಲ್ಲಿಂದ ನ್ಯೂಸ ಪ್ರಿಂಟು ಆಮದುಮಾಡಿಕೊಳ್ಳುವ ಪರಿಶೀಲನೆಯಲ್ಲಿದೆ ಎಂದು ಕಲ್ಕತ್ತಾ ವಾರ್ತೆ

ಆಕಸ್ಮಿಕದಲ್ಲಿ ಸಿಕ್ಕಿ ತೀವ್ರಗೊಂಡಿದ್ದ ಇಬ್ಬರನ್ನು ಆಸ್ಪತ್ರೆಗೆ ಸಾಗಿಸುವ ಲಕ್ಷ್ಮಿಗೆ ರೂ 25ಪಾರಿತೋಷಕ ಕೊಡಲಾಯಿತೆಂದು ಮದರಾಸು ವಾರ್ತೆ

ಸ್ಥಾನಬದ್ಧರಾಗಿರುವ ಪಾಮು ಕರ್ಮ್ಯೂನಿಸ್ಟ್ ಪಾರ್ಲಿಮೆಂಟು ಸದಸ್ಯರು ಪ್ರತಿ ತಿಂಗಳೂ ಸಂಬಳ ಪಡೆಯುತ್ತಿರುವರೆಂದೂ, ರಜಕ್ಕೆ ಅರ್ಜಿ ಹಾಕಿಕೊಂಡಿರುವರೆಂದೂ ಪ್ರಕಟವಾಗಿದೆ

ದೆಹಲಿಯಲ್ಲಿ ನೀರಿನ ಕ್ಷಾಮ ತೀವ್ರವಾಗಿದೆ

ಜಮ್ಮುವಿನಲ್ಲಿ 21 ಪಾಕಿಸ್ತಾನಿಗೂ ಸ್ಥಳೀಯರು ಬಂಧಿಸಲ್ಪಟ್ಟಿದ್ದಾರೆ

21-5-65
No

ಸಮಯೋಚಿತ ಸೂಕ್ತಿಗಳು

—0—

ಧನ ಸಂಗ್ರಹದಲ್ಲಿ ಮಗ್ನನಾದವನಿಗೆ ಗುರು ಬಂಧುಗಳೆಂಬುದಿಲ್ಲ ; ಕಾಮ ಪೀಡಿತರಿಗೆ ಭಯ ನಾಚಿಕೆಗಳಿಲ್ಲ; ಹಸಿವಿನಿಂದ ಕಂಗೆಟ್ಟವನಿಗೆ ರುಚಿ ಪಾಕಗಳಿಲ್ಲ; ಚಿಂತಾತುರರಿಗೆ ನಿದ್ರೆ ನಿಡ್ರೆಗಳಿಲ್ಲ.

ಮದವೇರಿದ ಆನೆಯನ್ನು, ಭ್ರಷ್ಟನಾದ ಬ್ರಾಹ್ಮಣನನ್ನು ಕೆಟ್ಟ ದುರ್ಜನರ ಕುರುಡಾದ ಪುತ್ರನನ್ನು, ಅರಮನೆಯಲ್ಲಿರುವ ಅರಸನನ್ನೂ ದೂರದಲ್ಲಿ ಬಿಟ್ಟು ಬಿಡಬೇಕು.

ದೈವವೇ ಎಲ್ಲ ಕಡೆಗಳಲ್ಲಿ ಫಲಿಸುವುದೇ ಹೊರತು, ಎಡ್ಡೆ ಪೌರುಷಗಳಲ್ಲ : ಸಮುದ್ರ ಮಥನದಿಂದ ಹುಟ್ಟಿದ ಲಕ್ಷ್ಮಿಯನ್ನೂ, ಹಾಲು ವಿಷವನ್ನೂ ಪಡೆದಂತೆ.

ದೂರದ ಬೆಟ್ಟಗಳು ಚೆಂದ, ಕೂಳೆಯು ಮುಖಾಲಂಕಾರದಿಂದ ಚೆಂದ, ಯುದ್ಧದ ಸದ್ದಿಯು ಚೆಂದ, ಹೀಗೆ ಈ ಮೂರು ದೂರದಿಂದಲೇ ಚೆಂದ.

ಧರ್ಮದಿಂದ ರೋಗವು ನಾಶವಾಗುತ್ತದೆ, ಧರ್ಮದಿಂದ ಗ್ರಹದೋಷವು ದೂರವಾಗುತ್ತದೆ, ಧರ್ಮದಿಂದ ಶತ್ರುವು ನಷ್ಟವಾಗುತ್ತಾನೆ, ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ.

ವುಡ್‌ಲಾಂಡ್ 21—5—65 ರಿಂದ
ಶಿ ನ್ ಅವಿಶ್ರಾಂತ ಪ್ರಾರಂಭ

ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) Janwar

ಶಮ್ಮಿ ಕಪೂರ್, ಶ್ರೀಮತಿ ಸಾಯಿರಾ ಬಾನು ಮತ್ತು ಪ್ರಸಿದ್ಧ ತಾರೆಯರು ಪಾತ್ರವಹಿಸಿರುವರು

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಬಬ್ಬಿ ಸೋಲಂಕಿ

ಆಪೆರಾ— 21—5—65 ರಿಂದ

ಕಾದಲಿಕ್ಕ ನೇರಮಿಲ್ಲೈ [ತಮಿಳು]

ಮನಮೋಹಕ ವರ್ಣಾಂಜಲಿ ತಮಿಳು ಚಿತ್ರ — ದಿನ 3 ಆಟಗಳು

SHAKTI

SUDHA

A Superb Tonic

Help The Gorakshana

★

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಸಂಪತ್ತು, ಕಾಳಸಂತೆ ಪಶುವೈದ್ಯ ಮಂತ್ರಿವರ್ಯರುಗಳಿಂದ ಕೂಡಿದ ಏಕೈಕ ಕ್ಷೇತ್ರಸಂಚಾರ ಸಚಿತ್ರ ಪತ್ರಿಕೆ.

ವಾರ್ಷಿಕ ಚಂದಾ 50 ನ್ಯೆ ಪೈ ಸೆ "ಗೋರಕ್ಷಣ" ಕ್ಕೆ ಲೇಖನಗಳನ್ನೂ ದ್ರವ್ಯಸಹಾಯ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಮೈಸೂರಿನಿಂದ — ಕಛೇರಿಯ ಆಸೆಗಳು

ಗೋರಕ್ಷಣ ಪ್ರಾರಂಭದಿಂದ ಕಾರ್ಯಗಳು ಹೆಚ್ಚಿ ಜಾಸ್ತಿಗೆ ನಡೆಯಲಿದೆ

Edited, Printed & Published by the Proprietor
Dharma Prachara Nirata, M S Krishna Rao
at the Satyavati Press, Chamarajapuram Mysore 4